ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರು ಒಬ್ಬ ದೊಡ್ಡ ರೈತರಿದ್ದಾರೆ. ಅವರು ಕಬ್ಬನ್ನು ಬಹಳ ಚೆನ್ನಾಗಿ ಬೆಳೆದಿದ್ದಾರೆ ಕಬ್ಬನ್ನು ಬೆಳೆದ ಒಂದು ವರ್ಷದೊಳಗೆ ಕಾರ್ಖಾನೆಯವರು ಅದನ್ನು ತೆಗೆದುಕೊಳ್ಳಲೇ ಬೇಕೆಂದು ಫೋರ್ಸ್ ಮಾಡಲು ನನಗೆ ಅಧಿಕಾರವಿಲ್ಲ.

ಶ್ರೀ ಜಿ. ಮಾದೇಗೌಡ.—ಮಾನ್ಯ ಮಂತ್ರಿಗಳು ಅಧಿಕಾರಿಗಳನ್ನು ಕಳುಹಿಸುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ಅದೇ ರೀತಿ ಈಗ ಸರ್ಕಾರಕ್ಕೆ ಈ ಸಂಬಂಧವಾಗಿ ತಪ್ಪು ಮಾಹಿತಿ ಕೊಟ್ಟಿದ್ದರೆ, ಅಂತಹ ವರನ್ನು ಪ್ರಾಸಿಕ್ಯೂಟ್ ಮಾಡುತ್ತೀರಾ ?

ಇನ್ನು ಎರಡನೆಯದಾಗಿ ಈ ಸಕ್ಕರೆ ಕಾರ್ಖಾನೆಯನ್ನು ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ನಡೆಸುವುದಕ್ಕೆ ತಾವು ಶಿಫಾರಸ್ ಮಾಡುತ್ತೀರಾ ? ಇದನ್ನು ರಾಷ್ಟ್ರೀಕರಣ ಮಾಡುವುದರಿಂದ ರೈತರಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಅಜೀಜ್ ಸೇಟ್.—ರಾಷ್ಟ್ರೀಕರಣ ಮಾಡಬೇಕೆಂದು ಹೇಳತಕ್ಕಂಥ ಒಂದು ರೋಗ ಏನಿದೆ, ಅದನ್ನು ಪರಿಶೀಲನೆ ಮಾಡಬೇಕಾಗಿದೆ.

ಇನ್ನು ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸುತ್ತೇನೆಂದು ಸಲ ಹೇಳಿದ್ದೇನೆ.

ಶ್ರೀ ಜಿ. ಮಾದೇಗೌಡ.—ಈಗ ಬಂದಿರುವ ವರದಿ ತಪ್ಪಾಗಿದ್ದರೆ ಸಂಬಂಧಪಟ್ಟವರನ್ನು ಪ್ರಾಸಿಕ್ಯೂಟ್ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ನನಗೆ ವರದಿ ಬರುವುದಕ್ಕೆ ಮುಂಚೆಯೇ ಅದನ್ನು ಹೇಗೆ ಹೇಳಲಿ ?

ಶ್ರೀ ಸಿ.ಎಂ. ಇಬ್ರಾಹಿಂ.—ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಆದಕಾರಣ ತನಿಖೆ ಮಾಡಲು ಅಲ್ಲಿಗೂ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಆ ಪ್ರಶ್ನೆ ಇಲ್ಲಿ ಇಲ್ಲ, ಆದರೂ ಸಹ ಅಲ್ಲಿಗೂ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ.

Loans given by SC and ST Corporation

535 SMT. RENUKA RAJENDRAN (Chikkaballapur)—Will the Minister for Law, Social welfare and Backward Classes be pleased to state :—

(*a*) what are the loans and the amounts given by the SC/ST Corporation to the individuals and organisation during the last 3 years;

(*b*) the details of loan given in each district during the past three years;

(*c*) what is the technical advice given by the Corporation;

(*d*) The percentage of recovery of loan in each District?

SRI L.G. HAVANUR (Minister for Law, Social Welfare and Backward Classes)—

(*a*) The loans sanctioned are as follows :—

1975-76	Nil	Nil
1976-77	731 cases	Rs. 18.11 lakhs
1977-78	499 cases	Rs. 10.69 lakhs
Total ...	1230 cases	Rs. 28.80 lakhs

(b) The statement Laid on the Table,*

(c) Technical staff at the Block level renders necessary assistance and guidance.

(d) The statement Laid on the table.*

SMT. RENUKA RAJENDRAN—May I know the total number of applications received by the Corporation since its inception?

† SRI L.G. HAVANUR—The information that is presently availble with me is that the Corporation has sanctioned Rs. 28.80 lakhs to 4,230 applicants belonging to SC/STs during 1976-77 and 1977-78. At present I do not have the number of appliactions received.

ಶ್ರೀಮತಿ ರೇಣುಕಾ ರಾಜೇಂದ್ರನ್ — ೧೯೭೬-೭೭ರಲ್ಲಿ ೭೩೧ ಪ್ರಕರಣಗಳಿಗೆ ಸಂಬಂಧಪಟ್ಟಂತೆ ೧೮ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ. ಆದರೆ ೧೯೭೭-೭೮ರಲ್ಲಿ ಕೇವಲ ೪೯೯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ೧೦ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲು ಕಾರಣವೇನು ?

ಶ್ರೀ ಎಲ್. ಜಿ. ಹಾವನೂರ್—೧೯೭೬-೭೭ರಲ್ಲಿ ಪೂರ್ತಿಯಾಗಿ ಸಾಲದ ಹಣವನ್ನು ಕಾರ್ಪೋರೇಷನ್ ಅವರೇ ಕೊಟ್ಟಿದ್ದಾರೆ. ಆದರೆ ೧೯೭೭-೭೮ರಲ್ಲಿ ಇದಕ್ಕೆ ಸಂಬಂಧಪಟ್ಟ ರೂಲ್ಸ್‌ನ್ನು ಬದಲಾವಣೆ ಮಾಡಲಾಯಿತು. ಅಂದರೆ ಶೇಕಡಾ ೨೫ರಷ್ಟು ಹಣವನ್ನು ಕಾರ್ಪೋರೇಷನ್ ಅವರು ಕೊಡಬೇಕೆಂದು ಉಳಿದ ೭೫ರಷ್ಟು ಹಣವನ್ನು ಬ್ಯಾಂಕ್‌ನವರು ಸಾಲದ ರೂಪದಲ್ಲಿ ಕೊಡಬೇಕೆಂದು ರೂಲ್ಸ್‌ನ್ನು ಬದಲಾವಣೆ ಮಾಡಲಾಯಿತು. ಆದರೆ ಬ್ಯಾಂಕ್‌ನವರು ನಮ್ಮ ನಿರೀಕ್ಷೆಗೆ ತಕ್ಕಂತೆ ಸಹಕಾರ ಕೊಡದ ಕಾರಣ ಈ ಒಂದು ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ.

ಶ್ರೀಮತಿ ರೇಣುಕಾ ರಾಜೇಂದ್ರನ್—ಈ ಸಂಸ್ಥೆಯವರು ಸೀಡ್ ಮನಿ ಎಂದು ೨೫ ಪರ್ಸೆಂಟ್ ಕೊಡುತ್ತಾರೆ. ಆದರೆ ಉಳಿದ ೭೫ ಪರ್ಸೆಂಟ್ ಹಣವನ್ನು ಬ್ಯಾಂಕ್‌ನವರು ಕೊಡುವುದಕ್ಕೆ ಮುಂದೆ ಬರುವುದಿಲ್ಲ. They put so many conditions which cannot be fulfilled Therefore, I request the Government to take necessary steps in this regard to assist the SC/ST people.

SRI L.G. HAVANUR—The suggestion appears to be good; we shall examine it and take a decision.

ಶ್ರೀಮತಿ ರೇಣುಕಾ ರಾಜೇಂದ್ರನ್— ಈಗಾಗಲೇ ಕೆಲವು ಪ್ರಕರಣಗಳಲ್ಲಿ ಸಾಲದ ರೂಪದಲ್ಲಿ ಹಣವನ್ನು ಏನು ಮಂಜೂರು ಮಾಡಲಾಗಿದೆ, ಅದು ಸರಿಯಾಗಿ ಉಪಯೋಗವಾಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಪ್ರತಿ ೩ ತಿಂಗಳಿಗೊಮ್ಮೆ ವರದಿ ತರಿಸಿಕೊಳ್ಳುವ ಏರ್ಪಾಡನ್ನು ಏನಾದರೂ ಮಾಡಿದ್ದೀರಾ ?

SRI L.G. HAVANUR—Very recently we have appointed District Evaluation Officers who would assist in the implementation of the schemes and we hope to get the report soon about the number of beneficiaries, the extent to which they been benefited and the number of defaulters and other particulars.

ಶ್ರೀ ವೈ. ರಾಮಕೃಷ್ಣ—೧೯೭೬-೭೭ನೇ ಸಾಲಿಗೆ ಬಂದಂಥ ಅರ್ಜಿಗಳೆಷ್ಟು, ಕಾರ್ಪೋರೇಷನ್ ಬಳಿ ಇದ್ದಂಥ ಹಣವೆಷ್ಟು? ೧೯೭೭-೭೮ರಲ್ಲಿ ಬಂದಂಥ ಅರ್ಜಿಗಳೆಷ್ಟು, ಕಾರ್ಪೋರೇಷನ್ ಬಳಿ ಇದ್ದಂಥ ಹಣವೆಷ್ಟು ?

---

* Copy placed in the Karnataka Legislature Library vide No. 16 dated 18th April 1979.

ಶ್ರೀ ಎಲ್.ಜಿ. ಹಾವನೂರ್—ಆ ಬಗ್ಗೆ ತಕ್ಷಣ ನನ್ನ ಹತ್ತಿರ ಮಾಹಿತಿಯಿಲ್ಲ. ತಾವು ಪ್ರತ್ಯೇಕ ಪ್ರಶ್ನೆ ಕೇಳಿದರೆ ಮಾಹಿತಿ ಒದಗಿಸುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ—ಇಲ್ಲಿ ೨೮ ಲಕ್ಷ ರೂಪಾಯಿಗಳವರೆಗೆ ಸಾಲ ಕೊಡಲಾಗಿದೆ ಎಂದು ಹೇಳಿದ್ದೀರಿ. ಬೇರೆ ಕಡೆಯಲ್ಲಿ ಎಷ್ಟು ಹಣ ತೊಡಗಿಸಲಾಗಿದೆ ಮತ್ತು ಈ ಕಾರ್ಪೋರೇಷನ್‌ಗೆ ಸರ್ಕಾರದಿಂದ ಒದಗಿಸಿರತಕ್ಕಂಥ ಹಣ ಎಷ್ಟೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಲ್ ಜಿ. ಹಾವನೂರ್—ಈ ಸಂಸ್ಥೆಯ ಬಂಡವಾಳ ಒಂದು ಕೋಟಿ ರೂಪಾಯಿಗಳು. ಪೇಡ್-ಅಪ್ ಕ್ಯಾಪಿಟಲ್ ೮೩ ಲಕ್ಷ ರೂಪಾಯಿಗಳು. ಈ ಸಂಸ್ಥೆಯವರು ಸಾಲವಾಗಿ ಹಣವನ್ನು ಒದಗಿಸುತ್ತಿರುವುದರ ಜೊತೆಗೆ, ಬೆಂಗಳೂರಿಂ ಎಚ್.ಎಂ.ಟಿ ವಾಚ್ ಫ್ಯಾಕ್ಟರಿ ಅವರೊಡನೆ ಒಂದು ಕೊಲಬರೇಷನ್ ಮಾಡಿಕೊಂಡು ಪರಿಜನರಲ್ಲಿ ೬೦ ಜನ ಮಹಿಳೆಯರು ವಾಚ್‌ಗಳನ್ನು ಅಸೆಂಬಲ್ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಕೂಡ ಬಹಳ ದೊಡ್ಡ ಮೊತ್ತವನ್ನು ತೊಡಗಿಸಲಾಗಿದೆ.

ಶ್ರೀ ವೈ. ರಾಮಕೃಷ್ಣ—೮೩ ಲಕ್ಷ ರೂಪಾಯಿಗಳಷ್ಟು ಷೇರ್ ಕ್ಯಾಪಿಟಲ್ ಇದರೂ ಸಹ ಅದರಲ್ಲಿ ೧೦ ಲಕ್ಷ ರೂಪಾಯಿಗಳನ್ನು ಮಾತ್ರ ವಿಚ್ರ್ಚು ಮಾಡಲಾಗಿದೆ. ಇಲ್ಲಿ ಹಣವಿದ್ದರೂ ವಿಚ್ರ್ಚು ಮಾಡದಿರುವುದಕ್ಕೆ ಕಾರಣಕರ್ತರು ಯಾರು? ತಾವು ಏತಕ್ಕೆ ಸರಿಯಾಗಿ ಸೂಪರ್‌ವಿಷನ್ ಮಾಡಲಿಲ್ಲ ? ಇಲ್ಲಿ ತಮ್ಮ ಮೇಲೂ ಜವಾಬ್ದಾರಿ ಇದೆಯಲ್ಲವೇ?

ಶ್ರೀ ಎಲ್.ಜಿ. ಹಾವನೂರ್—ನಾನು ಈ ಖಾತೆಯನ್ನು ಮೊಟ್ಟಮೊದಲನೆಯದಾಗಿ ಪಡೆದುಕೊಂಡ ಮೇಲೆ ನಾನು ಸಾಕಷ್ಟು ನ್ಯಾಯವಷ್ಟನ್ನು ಈ ಜನರಿಗೆ ಒದಗಿಸಿಕೊಡಲಿಲ್ಲವೆಂದು ಕೆಲವರು ತಿಳಿದುಕೊಂಡಿದ್ದರೆ, ಅದು ನನ್ನ ದುರ್ದೈವ. ನನ್ನ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ ವೆಯಿದು ತಮ್ಮ ಇಚ್ಛೆಯಾಗಿದ್ದರೆ ತಾವು ಈ ಬಗ್ಗೆ ಸಲಹೆಗಳನ್ನು ಕೊಡಿರಿ, ನಾನು ಅದನ್ನು ಮುಖ್ಯ ಮಂತ್ರಿಗಳಿಗೆ ತಿಳಿಸುತ್ತೇನೆ. ನಂತರ ಅವರು ಈ ಖಾತೆಯನ್ನು ಬದಲಾವಣೆ ಮಾಡುವುದಿದ್ದರೆ ನಾನು ಸಂತೋಷದಿಂದ ಬಿಟ್ಟುಬಿಡುತ್ತೇನೆ. ಹರಿಜನ ಮತ್ತು ಗಿರಿಜನ ಉದ್ಧಾರ ಬೇರೆಯವರಿಂದ ಆಗುವುದಿದ್ದರೆ ಆಗಲಿ; ಈ ಬಗ್ಗೆ ಬೇಕಾದರೆ ಗಂಟೆಗಟ್ಟಲೆ ಮಾತನಾಡಬಹುದು; ಇಲ್ಲಿ ನಾವು ರೂಲ್ಸ್‌ನ್ನು ಬದಲಾವಣೆ ಮಾಡಿ ಶೇಕಡಾ ೭೫ರಷ್ಟು ಬ್ಯಾಂಕ್‌ನವರು ಕೊಡಬೇಕೆಂದು ಹೇಳಿದಾಗ, ಅವರು ಮುಂದೆ ಬರದ ಕಾರಣ ಇಷ್ಟು ಕಡಿಮೆ ಸಾಲವನ್ನು ಕೊಡುವುದಕ್ಕೆ ಕಾರಣವಾಯಿತು. ಮತ್ತೊಂದು ಬಹಳ ನೋವಿನ ಸಂಗತಿ ಯೆಂದರೆ, ಇಲ್ಲಿಯವರೆಗೆ ಬ್ಯಾಂಕ್ ಮೂಲಕ ಇಲ್ಲದೇ ಕಾರ್ಪೋರೇಷನ್ ಮೂಲಕ ಯಾರು ಯಾರು ಹಣ ಸಾಲ ಪಡೆದಿದ್ದಾರೆ. ಅಂತಹವರು ಹಣವನ್ನು ವಾಪಸ್ ಕೊಟ್ಟಿಲ್ಲ; ಇದಕ್ಕೆ ಮಾನ್ಯ ಸದಸ್ಯರು ಏನು ಹೇಳುತ್ತಾರೆ? ಈ ಪ್ರಶ್ನೆಯನ್ನು ನಾನು ಕೇಳಬಹುದೇ ?

ಶ್ರೀಮತಿ ರೇಣುಕಾ ರಾಜೇಂದ್ರನ್—ನೀವು ನಿಮ್ಮ ಖಾತೆಯನ್ನು ಬಿಟ್ಟುಕೊಡಬೇಕಾಗಿಲ್ಲ; ನಾವು ನಿಮ್ಮಿಂದ ಇನ್ನೂ ಹೆಚ್ಚಿನ ಕೆಲಸಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಇಲ್ಲಿ ಹಣ ಸರಿಯಾಗಿ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಕಂಡೀಷನ್‌ಗಳನ್ನು ಸಡಿಲ ಮಾಡಬೇಕೆಂದು ತಮ್ಮನ್ನು ನಾನು ಕೇಳುತ್ತಿರುವುದು;

ಶ್ರೀ ಎಲ್ ಜಿ. ಹಾವನೂರ್—ಸಾಲ ತೆಗೆದುಕೊಂಡು ಹೋದವರಿಗೆ ತಾವು ಮೇಲಿ ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಹೋದಮೇಲೆ ಅದನ್ನು ಸಮಯಕ್ಕೆ ಸರಿಯಾಗಿ ಬಡ್ಡಿ ಹಾಗೂ ಕಂತುಗಳನ್ನು ಸಮಯಕ್ಕೆ ಸರಿಯಾಗಿ ವಾಪಸ್ಸು ಕೊಡಬೇಕು ಎಂದು. ಅದು ಅವರ ಕರ್ತವ್ಯ, ಸಾಲ ತೆಗೆದುಕೊಂಡು ಹೋದ ಹಣವನ್ನು ವಾಪಸ್ಸು ಮಾಡದಿದ್ದರೆ ಆ ಬಾಬಿಗೆ ಎಷ್ಟು ಹಣವನ್ನು ಒದಗಿಸಿದರೂ ಅದು ಕಡಿಮೆ ಯಾಗುತ್ತದೆ. ಈ ರೀತಿಯ ಸಾಲವನ್ನು ವಾಪಸ್ಸು ಕೊಡತಕ್ಕ ಪ್ರವೃತ್ತಿ ಜನಗಳಲ್ಲಿ ಇಲ್ಲದೇ ಇರುವುದರಿಂದ ಬ್ಯಾಂಕಿನವರು ಸಹ ಸಾಲ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಆದುದರಿಂದ ತಾವು ತಮ್ಮ ಜನಗಳಿಗೆ ಹೇಳಿ ಸಾಲ ತೆಗೆದುಕೊಂಡದ್ದನ್ನು ವಾಪಸ್ಸು ಕೊಡಬೇಕು ಎಂದು. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪರಿಜನ ಗಿರಿಜನರಿಗೆ ಅನುಕೂಲವಾಗುತ್ತದೆಂದು ತಾವು ಜನಗಳಿಗೆ ಉಪದೇಶ ಕೊಡಬಹುದಲ್ಲವೇ? ೧-೩೦ ಪಿ.ಎಂ.

ಶ್ರೀ ವೈ. ರಾಮಕೃಷ್ಣ ಮಾನ್ಯ ಮಂತ್ರಿಯವರು ಬಹಳ ಉದ್ವೇಗದಿಂದ ಉತ್ತರ ಕೊಟ್ಟಿದ್ದಾರೆ. ನಾನು ನಿಮ್ಮ ರಾಜೀನಾಮೆಯನ್ನು ಕೇಳಲಿಲ್ಲ. ೧೯೭೬-೭೭. ೧೯೭೭-೭೮ರಲ್ಲಿ ಬೋರ್ಡ್ ನಡೆಸಿದವರು

ಅವರು ರಾಜೀನಾಮೆ ಕೊಡಲಿ ಎಂದು ಹೇಳಿದೆ. ೧೯೭೭-೭೮ರಲ್ಲಿ ಅನಾಮತ್ತು ಅರ್ಜಿ ಇದ್ದರೂ ಕೂಡ ಏತಕ್ಕೆ ಸಾಲವನ್ನು ಕೊಡಲಿಲ್ಲ. ಹರಿಜನರ ಸಮಸ್ಯೆಯ ವಿಚಾರದಲ್ಲಿ ಯಾರಿಗೆ ಆಸಕ್ತಿ ಇದೆಯೋ ಅಂಥಹ ವರನ್ನು ಚೇರ್ಮನ್ ಮಾಡದೆ ಇರುವುದರಿಂದ ಇದರ ಬಗ್ಗೆ ಆಗಿರತಕ್ಕೆ ಅನ್ಯಾಯದ ಹೊಣೆಗಾರಿಕೆಯನ್ನು ಸರ್ಕಾರದವರೇ ಹೊರಬೇಕು ಅಲ್ಲವೆ ?

ಶ್ರೀ ಎಲ್.ಜಿ. ಹಾವನೂರ್--ಅದಕ್ಕೆ ಅಧ್ಯಕ್ಷರು ಯಾವಾಗಲೂ ಎಸ್.ಸಿ. ಸದಸ್ಯರೇ ಇದ್ದರು ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ--ಮಾನ್ಯ ಹಾವನೂರ್ ಅವರು ಯಾಕೋ ಸ್ವಲ್ಪ ಉದ್ವೇಗದಿಂದ ಮಾತನಾಡಿದರು. ಯಾವುದೇ ಜಾತಿಯ ಮಂತ್ರಿಗಳು ಇರಲಿ ಆ ಪ್ರಶ್ನೆ ಇಲ್ಲಿ ಇಲ್ಲ. ಸರ್ಕಾರದ ಕೆಲಸ ಮಾಡಬೇಕಾದರೆ ಮಂತ್ರಿಗಳು ಹೊಣೆ ಹೊತ್ತು ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸಬೇಕೆಂದು ಮುಖ್ಯ ಮಂತ್ರಿಗಳು ಅವರನ್ನು ನೇಮಿಸಿದ್ದಾರೆ. ಖಾತೆಯನ್ನು ಬದಲಾವಣೆ ಮಾಡಬೇಕು ಎನ್ನುವ ಪ್ರಶ್ನೆ ಇಲ್ಲ. ನಿಮಗೆ ಹರಿಜನರ ಬಗ್ಗೆ ಅವಿಶ್ವಾಸವಿದೆ ಎಂದು ಮಾತನಾಡುವುದು ಸರಿಯಲ್ಲ ಹರಿಜನರಾಗಲಿ, ಯಾವುದೇ ಜಾತಿಯವರಾಗಲಿ ಮಂತ್ರಿಗಳು ಆ ಖಾತೆಯನ್ನು ವಹಿಸಿಕೊಂಡ ಮೇಲೆ ಅವರ ಕರ್ತವ್ಯವನ್ನು ಮಾಡುತ್ತಾರೆನ್ನುವ ಭರವಸೆಯಿಂದ ಮುಖ್ಯ ಮಂತ್ರಿಗಳು ಅವರಿಗೆ ಆ ಖಾತೆಯನ್ನು ವಹಿಸಿರುತ್ತಾರೆ. ಆ ಖಾತೆಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ತಿದ್ದತಕ್ಕ ವ್ಯವಸ್ಥೆ ಮಾಡಿ, ನಿಯಮಗಳಲ್ಲಿ ಏನಾದರೂ ದೋಷ ಇದ್ದರೆ ಅದನ್ನು ಸಡಿಲ ಮಾಡಿ. ಅಧಿಕಾರಿಗಳೇನಾದರೂ ಕರ್ತವ್ಯ ಚ್ಯುತಿ ಮಾಡಿದ್ದರೆ ಅವರ ಮೇಲೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಖಾತೆಯನ್ನು ಬದಲಾವಣೆ ಮಾಡತಕ್ಕ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಸಾಲ ತೆಗೆದುಕೊಂಡ ಹಣವನ್ನು ವಾಪಸ್ಸು ಕೊಡುವಂತೆ ನಿಮ್ಮ ಜನಗಳಿಗೆ ಹೇಳಿ ಎಂದು ಹೇಳಿದ್ದು ಸರಿಯಲ್ಲ. ಹರಿಜನ ಮಂತ್ರಿಗಳು ನಮಗೂ ಮಂತ್ರಿಗಳು. ಹಿಂದುಳಿದವರಿಗೂ ಅವರು ಮಂತ್ರಿಗಳು. ನಮಗೂ ಮಂತ್ರಿಗಳು. ಕರ್ನಾಟಕದ ಸಮಗ್ರ ಜನತೆಗೆ ಅವರು ಮಂತ್ರಿಗಳು. ಅವರು ಹರಿಜನರು ನಮ್ಮವರಲ್ಲ ಎನ್ನುವ ಧಾಟಿಯಲ್ಲಿ ಮಾತನಾಡಿದ್ದು ಸರಿಯಲ್ಲ.

ಶ್ರೀ ಎಲ್.ಜಿ. ಹಾವನೂರ್--ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ನಾಲ್ಕು ಉಪ ದೇಶದ ಮಾತುಗಳನ್ನು ಹೇಳಿದರು. ನಾನು ಮೊದಲೇ ಹೇಳಿದ್ದೇನೆ ಇದರ ಬಗ್ಗೆ ಲಕ್ಷ ವಹಿಸಿ ನಮ್ಮ ಕಾರ್ಪೋರೇಷನ್‌ನಲ್ಲಿ ಏನಾದರೂ ಚ್ಯುತಿ ಆಗಿದ್ದರೆ ಅದನ್ನು ತಿದ್ದುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಈ ವಿರೋಧ ಪಕ್ಷದ ನಾಯಕರಿಗೆ ಹಾಗೂ ಈ ಸದನಕ್ಕೆ ಆಶ್ವಾಸನೆಯನ್ನು ಕೊಡುತ್ತೇನೆ. ಶ್ರೀಮಾನ್ ಪೈ. ರಾಮಕೃಷ್ಣ ಅವರು ನಾನು ಅದಕ್ಕೆ ವೈಯಕ್ತಿಕವಾಗಿ ಜವಾಬ್ದಾರಿ ಎಂದು ಹೇಳಿದರೆ ನಾನಾದರೂ ಹೇಳುತ್ತೇನೆ ಈ ಸರ್ಕಾರದಲ್ಲಿ ಶ್ರೀಮಾನ್ ರಾಮಕೃಷ್ಣ ಅವರೂ ಕೂಡ ವೈಯಕ್ತಿಕವಾಗಿ ಅದಕ್ಕೆ ಜವಾಬ್ದಾರರು ಎಂದು ಹೇಳಿದರೆ ತಪ್ಪಾಗುವುದಿಲ್ಲ.

Bus stand at Murugod, Soudathi Taluk

559 SRI R. C. BALEKUNDARGI (Bailhongal).— Will the Minister for Transport and Tourism be pleased to state :—

(*a*) whether there is any proposal for construction of K.S.R.T.C Bus-stand in Murugod of Soudathi taluk ;

(*b*) if so, the estimated cost of the same ;

(*c*) when the work will be started ?

SRI R. GUNDU RAO (Minister for Transport and Tourism).—

(*a*) No.

(*b*) & (*c*) These questions do not arise in view of reply to clause (*a*).